# – ಉಡುಪಿ ನಗರಸಭೆ –

ಉನಸ.ಬಿ.ಸಿಆರ್.ಟೆಂಸಂ.06/2009–10 ದಿನಾಂಕ 02.11.2009

## ಟೆಂಡರ್ ಪ್ರಕಟಣೆ

ಉಡುಪಿ ನಗರಸಭೆಯಲ್ಲಿ 1994 ರಿಂದ 2009–10ರ ವರೆಗಿನ ಜನನ ಮರಣಗಳ ನೋಂದಣಿ ದಾಖಲಾತಿಗಳನ್ನು ಗಣಕೀಕರಣಗೊಳಿಸಲು ಪ್ರತಿ ಒಂದು ದಾಖಲಾತಿಯ ಡಾಟಾ ಎಂಟ್ರಿಗೆ ದರವನ್ನು ಸೂಚಿಸಿ ಟೆಂಡರನ್ನು ಆಹ್ವಾನಿಸಲಾಗಿದೆ. ಪೌರಾಯುಕ್ತರು ಅಥವಾ ಇವರಿಂದ ಅಧಿಕಾರ ಹೊಂದಿದವರು ದಿನಾಂಕ 21.11.2009 ರಂದು ಸಂಜೆ 4.00 ಗಂಟೆಯವರೆಗೆ ಟೆಂಡರನ್ನು ಸ್ವೀಕರಿಸಲಿರುವರು. ದಿನಾಂಕ 20.11.2009ರ ವರೆಗೆ ರೂ. 500–00 ಶುಲ್ಕ ಪಾವತಿಸಿ ಟೆಂಡರು ನಮೂನೆಯನ್ನು ಪಡೆದುಕೊಳ್ಳಬಹುದು. ಬಂದಿರುವ ಟೆಂಡರುಗಳನ್ನು ದಿನಾಂಕ 21.11.2009 ರಂದು ಲಭ್ಯವಿರುವ ಗುತ್ತಿಗೆದಾರರ ಸಮಕ್ಷಮ ತೆರೆಯಲಾಗುವುದು. ಹೆಚ್ಚಿನ ವಿವರ ಮತ್ತು ಶರತ್ತುಗಳನ್ನು ಈ ಕಛೇರಿಯಿಂದ ಪಡೆದುಕೊಳ್ಳಬಹುದು.

## – ಷ ರ ತ್ತು ಗ ಳು –

1) ಟೆಂಡರಿನೊಂದಿಗೆ ರೂ. 5,000–00ದ ಮೊತ್ತದ ಇ.ಎಂ.ಡಿ. ಯನ್ನು ಲಗತ್ತಿಸತಕ್ಕದ್ದು.
2) ಭಾಗವಹಿಸಲಿಚ್ಚಿಸುವ ಏಜೆನ್ಸಿಯವರು ತಮ್ಮ ವಿಳಾಸದ ದೃಢೀಕರಣ ಪತ್ರ ಲಗತ್ತಿಸುವುದು.
3) ಪ್ರತೀ ಒಂದು ದಾಖಲಾತಿಯ ಡಾಟಾ ಎಂಟ್ರಿಗೆ ರೂ. 1–50 ಗಿಂತ ಅಧಿಕ ನೀಡಲಾಗುವುದಿಲ್ಲ.
4) ನಗರಸಭೆಯಲ್ಲಿರುವ ಜನನ ಮರಣ ದಾಖಲಾತಿಯ ವಹಿಯನ್ನು ಪರಿಶೀಲಿಸಿ ಈಗಾಗಲೇ ಅಳವಡಿಸಿಕೊಂಡಿರುವ ನಿಗಧಿತ Saftware ನಲ್ಲಿ ಡಾಟಾ ಎಂಟ್ರಿ ಮಾಡತಕ್ಕದ್ದು,
5) ಪೂರ್ಣಗೊಳಿಸಿದ ಗಣಕೀಕೃತ ದಾಖಲಾತಿಗಳ ಪ್ರಿಂಟ್‌ಗಳನ್ನು ಪ್ರಿಂಟ್ ತೆಗೆದು ಆರೋಗ್ಯ ಪರಿವೀಕ್ಷಕರಿಂದ ಪರಿಶೀಲಿಸಿಕೊಂಡು ಇದರಲ್ಲಿ ತಪ್ಪುಗಳಿದ್ದಲ್ಲಿ ಸರಿಪಡಿಸಿ ಮತ್ತೇ ಗಣಕೀಕೃತ ಮಾಹಿತಿ ಶೇಕಡಾ 100 ಸರಿ ಇರುವ ಬಗ್ಗೆ ಪರಿಶೀಲಿಸಿ ದೃಢಪಡಿಸಿ ನೀಡತಕ್ಕದ್ದು.
6) ಡಾಟಾ ಎಂಟ್ರಿ ಕಾರ್ಯ ಪೂರ್ಣಗೊಳಿಸಿರುವಷ್ಟು ಸಂಖ್ಯೆಗಳಿಗೆ ಡಾಟಾ ಎಂಟ್ರಿ ಶೇಕಡಾ 100 ಸರಿ ಇರುವುದನ್ನು ದೃಢಪಡಿಸಿಕೊಂಡು ಬಿಲ್ಲನ್ನು ಪಾವತಿಸಲಾಗುವುದು.
7) ಪ್ರತೀ ತಿಂಗಳು ಕನಿಷ್ಟ 8000 ಡಾಟಾ ಎಂಟ್ರಿಗಳನ್ನು ಶೇಕಡಾ 100 ರಷ್ಟು ಸರಿ ಮಾಡಿ ಪೂರ್ತಿಗೊಳಿಸಿ ಕೊಡತಕ್ಕದ್ದು.
8) ಕಾರ್ಯಾದೇಶ ನೀಡಿದ 12 ತಿಂಗಳ ಒಳಗೆ ವಹಿಸಿದ ಕಾರ್ಯವನ್ನು ಪೂರ್ತಿಗೊಳಿಸಿ ಕೊಡತಕ್ಕದ್ದು.
9) ಮೇಲಿನ ಯಾವುದೇ ಶರತ್ತುಗಳನ್ನು ಉಲ್ಲಂಘಿಸಿದಲ್ಲಿ ಟೆಂಡರನ್ನು ರದ್ದುಪಡಿಸಿ ಮರು ಟೆಂಡರು ಆಹ್ವಾನಿಸಿ, ಈ ಬಗ್ಗೆ ಆಗುವ ಹೆಚ್ಚುವರಿ ವೆಚ್ಚವನ್ನು ನಿಮ್ಮಿಂದ ಪಡೆಯಲು ಕ್ರಮ ಕೈಗೊಳ್ಳಲಾಗುವುದು.
10) ಡಾಟಾ ಎಂಟ್ರಿ ಕಾರ್ಯವನ್ನು ಈ ಕಛೇರಿಯ ವ್ಯವಸ್ಥಾಪಕರ ಮತ್ತು ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರ ಮೇಲುಸ್ತುವಾರಿಯಲ್ಲಿ ಕೈಗೊಳ್ಳತಕ್ಕದ್ದು.
11) ಸ್ವೀಕೃತಿಗೊಂಡ ಟೆಂಡರಿನ ಇ.ಎಂ.ಡಿ. ಯನ್ನು ಡಾಟಾ ಎಂಟ್ರಿ ಪೂರ್ತಿಗೊಳ್ಳುವವರೆಗೆ ಹಿಡಿದು ಇಟ್ಟುಕೊಳ್ಳಲಾಗುವುದು. ಇದಕ್ಕೆ ಬಡ್ಡಿ ಅನ್ವಯವಾಗುವುದಿಲ್ಲ.
12) ಅಸ್ವೀಕೃತಗೊಂಡ ಟೆಂಡರಿನ ಇ.ಎಂ.ಡಿ. ಯನ್ನು ಟೆಂಡರು ಮಂಜೂರಾತಿಗೊಂಡ ನಂತರ ನೀಡಲಾಗುವುದು.
13) ಮೇಲಿನ ಶರತ್ತುಗಳಲ್ಲದೇ ಹೆಚ್ಚುವರಿ ಶರತ್ತುಗಳನ್ನು ವಿಧಿಸುವ ಹಕ್ಕನ್ನು ಕಾದಿರಿಸಲಾಗಿದೆ.
14) ಡಾಟಾ ಎಂಟ್ರಿ ಸಂಬಂಧ ಕಂಪ್ಯೂಟರನ್ನು ಈ ಕಛೇರಿಯಿಂದ ಒದಗಿಸಲಾಗುವುದು.
15) ಟೆಂಡರುದಾರರು ಸೂಚಿಸುವ ದರದಲ್ಲಿ ಎಲ್ಲಾ ಕರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಬಿಲ್ಲಿನಲ್ಲಿ ಸರಕಾರಕ್ಕೆ ಸಲ್ಲತಕ್ಕ ಎಲ್ಲಾ ಕರಗಳನ್ನು ಕಡಿತಗೊಳಿಸಲಾಗುವುದು.

| | |
|---|---|
| ಸಹಿ/-- | ಸಹಿ/– |
| ಅಧ್ಯಕ್ಷರು | ಪೌರಾಯುಕ್ತರು |
| ಉಡುಪಿ ನಗರಸಭೆ | ಉಡುಪಿ ನಗರಸಭೆ |

/ಪ್ರತಿ/

ಪೌರಾಯುಕ್ತರು

ನಗರ ಸಭೆ, ...